ಸಿ.ಸಿ .ನಂ.159/2022 ಪಿಡಬ್ಲೂಃ 2

ದಿನಾಂಕಃ 06-03-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

3. ಈ ಪ್ರಕರಣದಲ್ಲಿ ವೈಯಕ್ತಿಕ ಸಾಲಕ್ಕಾಗಿ ಅರ್ಜಿಯನ್ನು ಸಲ್ಲಿಸಿದ್ದರು . ಪರ್ಸನಲ್ ಲೋನ್ ಪಡೆದುಕೊಂಡಿದ್ದರು. ಎಲ್ಲಾ ದಾಖಲಾತಿಗಳ ಪ್ರಕಾರ ವೈಯಕ್ತಿಕ ಸಾಲವನ್ನೇ ಪಡೆದಿದ್ದರು . ಕೆಎ 47/8592 ವಾಹನಕ್ಕೆ ಸಂಬಂಧಪಟ್ಟಂತೆ ಎಷ್ಟು ಲೋನ್ ಗಳು ಆಗಿದ್ದವು ದಾಖಲಾತಿ ನೋಡಿ ಹೇಳಬೇಕು. ನಮ್ಮ ಬ್ಯಾಂಕಿನವರು ಈ ವಾಹನವನ್ನು ಎಷ್ಟು ಸಾಲಕ್ಕೆ ಸಂಬಂಧಪಟ್ಟಂತೆ ಎಷ್ಟು ಬಾರಿ ಶೀಲ್ ಮಾಡಿದ್ದಾರೆ ದಾಖಲಾತಿ ನೋಡಿ ಹೇಳಬೇಕು . ದಾಖಲಾತಿಗಳ ಪ್ರಕಾರ ವಾಹನ ಖರೀದಿಗಾಗಿ ಎಂದು ನಮೂದಾಗಿದೆ ಎಂದರೆ ಸಾಕ್ಷಿ ಪರ್ಸನಲ್ ಲೋನ್ ಎಂದು ಆಗಿದೆ ಎಂದು ನುಡಿದಿರುತ್ತಾರೆ.

4. ನಾನು ಫಿರ್ಯಾದು ಶಾಖೆಯಲ್ಲಿ ಕಳೆದ 9 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದೇನೆ. ಮಹೇಶ ಕರ್ಕಿಕರ ರವರ ಸಾಲದ ಖಾತೆ ಹಾಗೂ ಉಳಿತಾಯ ಖಾತೆ ಇರಬಹುದು ನೋಡಿ ಹೇಳಬೇಕು. ಆರೋಪಿ ಖರೀದಿ ಮಾಡುವ ಪೂರ್ವದಲ್ಲಿ ಸೆವೆಲೆಟ್ ವಾಹನವನ್ನು ನಮ್ಮ ಬ್ಯಾಂಕಿನವರು ಮೊದಲು ಜಪ್ತಿ ಆಗಿತ್ತೋ ಇಲ್ಲವೋ ಗೊತ್ತಿಲ್ಲ. ಆರೋಪಿ ಖರೀದಿಸುವ ಪೂರ್ವದಲ್ಲಿ ಆ ವಾಹನವನ್ನು ನಮ್ಮ ಬ್ಯಾಂಕಿನವರು ಲಿಲಾವು ಇಟ್ಟ ಬಗ್ಗೆ ಗೊತ್ತಿಲ್ಲ. ನನ್ನ ಮಾಹಿತಿ ಪ್ರಕಾರ ಆರೋಪಿ ತಮ್ಮ ಮಾಲೀಕತ್ವದ ಮೇಲ್ಕಂಡ ವಾಹನವನ್ನು ಅಡ ಇಟ್ಟು ಸಾಲವನ್ನು ಪಡೆದಿರುತ್ತಾರೆ. ಒಂದು ವಾಹನವನ್ನು ಅಡ ಇಟ್ಟು ಲೋನ್ ಕೊಡುವಾಗ ಆ ವಾಹನವದ ಎಲ್ಲಾ ದಾಖಲಾತಿಗಳನ್ನು ಪಡೆದುಕೊಂಡು ಲೋನ್ ಕೊಡುತ್ತೇವೆ ಎಂದರೆ ಸರಿ . ವಾಹನದ ಮಾಲೀಕತ್ವದ ಬಗ್ಗೆ ಹಾಗೂ ದಾಖಲಾತಿಗಳ ಬಗ್ಗೆ ಪರಿಶೀಲಿಸಿ ದಾಖಲಾತಿಗಳ ಪ್ರಕಾರ ಆತನ ಮಾಲೀಕತ್ವದಲ್ಲಿ ಇದೆ ಎಂದು

ಖಚಿತ ಪಡಿಸಿಕೊಂಡ ನಂತರ ಸಾಲವನ್ನು ಮಂಜೂರು ಮಾಡುತ್ತೇವೆ ಎಂದರೆ ಸರಿ . ವಾಹನ ಅಡಇಡುವ ಪೂರ್ವದಲ್ಲಿ ಸೆವೆರಲೆಟ್ ಎಂಜಾಯ್ ವಾಹನದ ಮಾಲೀಕತ್ವದ ದಾಖಲಾತಿಗಳು ಆರೋಪಿಯ ಹೆಸರಿನಲ್ಲಿ ಇರುವುದನ್ನು ನೋಡಿಯೇ ದಾಖಲಾತಿಗಳನ್ನು ಪಡೆದುಕೊಂಡಿದ್ದೇವೆ ಎಂದರೆ ಸಾಕ್ಷಿ ದಾಖಲಾತಿಗಳನ್ನು ನೋಡಿ ಹೇಳಬೇಕು ಎಂದು ನುಡಿದಿರುತ್ತಾರೆ. ಒಂದುವೇಳೆ ವಾಹನ ಅವರ ಹೆಸರಿನಲ್ಲಿ ಇಲ್ಲಾ ಎಂದರೆ ವಾಹನವನ್ನು ಅಡ ಇಟ್ಟುಕೊಳ್ಳಲು ಬರುವುದಿಲ್ಲ ಎಂದರೆ ಸರಿ . ವಾಹನಕ್ಕೆ ಸಂಬಂಧಪಟ್ಟ ಆರ್ ಸಿ , ಇನ್ಸುರೆನ್ಸ ಎಲ್ಲಾ ದಾಖಲಾತಿಗಳನ್ನು ಪಡೆದುಕೊಂಡಿದ್ದೇವೆ ಎಂದರೆ ಸಾಕ್ಷಿ ಓರಿಜನಲ್ ತೆಗೆದುಕೊಂಡಿದ್ದಾರೋ ದೃಢಿಕೃತ ನಕಲನ್ನು ತೆಗೆದುಕೊಂಡಿದ್ದಾರೆಯೋ ಗೊತ್ತಿಲ್ಲ . ಯಾವುದೇ ದಾಖಲಾತಿನ್ನು ಪಡೆದುಕೊಂಡರೆ ಅವು ಸಾಲದ ಖಾತೆಗೆ ಸಂಬಂಧಪಟ್ಟ ದಾಖಲಾತಿಗೆ ಇರುತ್ತದೆ ಎಂದರೆ ಸರಿ . ಒಂದು ವಾಹನವನ್ನು ಅಡವಿಡುವಾಗ ಅದಕ್ಕೆ ಸಂಬಂಧಪಟ್ಟಂತೆ ಆರ್ ಟಿ ಓ ರವರಿಂದ ವ್ಯಾಲುವೇಶನ್ ಅವರ ಕಡೆಯಿಂದ ಪಡೆಯಲಾಗುತ್ತದೆ ಎಂದರೆ ಸರಿ . ಅಂತಹ ದಾಖಲಾತಿಗಳನ್ನು ಕೂಡ ನಾವು ಪಡೆದುಕೊಂಡಿದ್ದೇವೆ ಎಂದರೆ ಸರಿ . ಆ ದಾಖಲಾತಿಗಳು ಸಾಲದ ಖಾತೆಯ ದಾಖಲಾತಿಗಳಲ್ಲಿ ಇರುತ್ತವೆ ಎಂದರೆ ಸರಿ . ಆ ಎಲ್ಲಾ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಹೆಡ್ ಆಫೀಸ್ ಜೊತೆ ಮಾತನಾಡಿ ನೋಡುತ್ತೇನೆ ಎಂದು ನುಡಿದಿರುತ್ತಾರೆ . ಸದರಿ ವಾಹನ ಎಷ್ಟು ವರ್ಷಗಳಿಂದ ಆರೋಪಿಯ ಮಾಲೀಕತ್ವದಲ್ಲಿ ಇತ್ತು ಗೊತ್ತಿಲ್ಲ . ಅಡವಿಟ್ಟ ವಾಹನವನ್ನು ಸೀಜು ಮಾಡಿರುತ್ತೇವೆ . ಸೀಜ್ ಮಾಡಿದ ವಾಹನವನ್ನು ಹರಾಜು ಮಾಡಿರುತ್ತೇವೆ . ಹರಾಜು ಪ್ರಕ್ರಿಯೆಯಲ್ಲಿ ವಾಹನಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಇಡಬೇಕಾಗುತ್ತದೆ ಎಂದರೆ ಸರಿ . ಹರಾಜು ಪ್ರಕ್ರಿಯೆಯಲ್ಲಿ ಎಲ್ಲಾ ದಾಖಲಾತಿಗಳು ಆರೋಪಿಯ ಹೆಸರಿನಲ್ಲಿರುವ ದಾಖಲಾತಿಗಳನ್ನು ಇಟ್ಟಿರುತ್ತೇವೆ . ಹರಾಜು ಪ್ರಕ್ರಿಯೆಯಲ್ಲಿ ದಾಖಲಾತಿಯ ಮೂಲ ಪ್ರತಿಯನ್ನು ಇಡಬೇಕಾಗುತ್ತದೆ ಎಂದರೆ ಸರಿ . ಹರಾಜು ಪ್ರಕ್ರಿಯೆಯ ಬಗ್ಗೆ ಹಾಗೂ ಹರಾಜು ಪ್ರಕ್ರಿಯೆಯಲ್ಲಿ ಯಾವ ಯಾವ ದಾಖಲೆಗಳನ್ನು ಇಟ್ಟಿದ್ದೆವು ಆ ಬಗ್ಗೆ ನಮ್ಮಲ್ಲಿ ದಾಖಲಾತಿಗಳು ಇರುತ್ತವೆ ಎಂದರೆ ಸರಿ . ಹರಾಜು ಪ್ರಕ್ರಿಯೆಯಲ್ಲಿ ಯಾರಿಂದ ವಾಹನವನ್ನು

ಸೀಜ್ ಮಾಡಲಾಗಿದೆ ಅವರಿಗೆ ನೋಟಿಸನ್ನು ಕೊಡಬೇಕಾಗುತ್ತದೆ ಎಂದರೆ ಸರಿ . ಯಾರ ಮಾಲೀಕತ್ವದ ವಾಹನವನ್ನು ಹಾರಾಜು ಮಾಡುತ್ತೇವೆ ಆ ಬಗ್ಗೆ ದಿನ ಪತ್ರಿಕೆಯಲ್ಲಿ ಜಾಹಿರಾತನ್ನು ಪ್ರಕಟಿಸಬೇಕು ಎಂದರೆ ಸರಿ . ಆರೋಪಿತನಿಗ ನಿಮ್ಮ ಮಾಲೀಕತ್ವದ ವಾಹನವನ್ನು ಹರಾಜಿಗೆ ಇಟ್ಟಿದ್ದೇವೆ ಎಂದು ನೋಟಿಸನ್ನು ಕೊಟ್ಟಿದ್ದೇವೆ . ನೋಟಿಸನ್ನು ಕೊಟ್ಟಿದ್ದರೆ ಹಾಗೂ ದಿನಪತ್ರಿಕೆಯಲ್ಲಿ ಪ್ರಕಟಣೆಯನ್ನು ಕೊಟ್ಟಿದ್ದರೆ ಆ ದಾಖಲಾತಿಗಳು ನಮ್ಮ ಹರಾಜು ಪ್ರಕ್ರಿಯೆಯ ದಾಖಲಾತಿಗಳಲ್ಲಿ ಇರುತ್ತವೆ ಎಂದರೆ ಸರಿ . ಆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ . ಹರಾಜಿನಲ್ಲಿ ಎಷ್ಟು ಜನ ಬಿಡ್ ಗಾರರು ಭಾಗವಹಿಸಿದ್ದರು ಹಾಗೂ ಎಷ್ಟು ಮೊತ್ತಕ್ಕೆ ವಾಹನ ಹರಾಜು ಆಯಿತು ದಾಖಲಾತಿನೋಡಿ ಹೇಳಬೇಕು. ನಿಮ್ಮ ವಾಹನ ಇಷ್ಟು ಮೊತ್ತಕ್ಕೆ ಹರಾಜು ಆಗಿದೆ ಎಂದು ವಾಹನದ ಮಾಲೀಕರಿಗೆ ತಿಳಿಸಬೇಕಾಗುತ್ತದೆ ಎಂದರೆ ಸಾಕ್ಷಿ ತಿಳಿಸಿದ್ದಾರೆಯೋ ಇಲ್ಲವೋ ಗೊತ್ತಿಲ್ಲ ಎಂದು ನುಡಿದಿರುತ್ತಾರೆ . ಅದನ್ನು ಲಿಖಿತವಾಗಿ ತಿಳಿಸಬೇಕಾಗುತ್ತದೆ ಎಂದರೆ ಗೊತ್ತಿಲ್ಲ. ಒಂದುವೇಳೆ ಲಿಖಿತವಾಗಿ ತಿಳಿಸಿದ್ದಲ್ಲಿ ಆ ದಾಖಲಾತಿಗಳು ಹರಾಜು ಪ್ರಕ್ರಿಯೆಯಲ್ಲಿ ಇರುತ್ತವೆ ಎಂದರೆ ಸರಿ . ವಾಹನವನ್ನು ಹರಾಜಿನಲ್ಲಿ ಯಾರು ಖರೀದಿ ಮಾಡಿದ್ದಾರೆ ಗೊತ್ತಿಲ್ಲ. ಈಗ ಸದರಿ ವಾಹನ ಯಾರ ಮಾಲೀಕತ್ವದಲ್ಲಿದೆ ಗೊತ್ತಿಲ್ಲ. ಯಾವುದೇ ಒಬ್ಬ ವ್ಯಕ್ತಿ ವಾಹನವನ್ನು ಅಡವು ಇಟ್ಟು ಸಾಲ ಪಡೆಯಲು ಬಂದಾಗ ಸದರಿ ವಾಹನ ಆ ವ್ಯಕ್ತಿಯ ಹೆಸರಿನಲ್ಲಿ ಇಲ್ಲ ಎಂಬುದಾದರೆ ಅಂತಹ ಸಾಲದ ಅರ್ಜಿ ತಿರಸ್ಕೃತಗೊಳ್ಳುತ್ತವೆ ಎಂದರೆ ಸರಿ . ಆ ವಾಹನ ಅಂತಹ ವ್ಯಕ್ತಿಯ ಕಬ್ಜಾದಲ್ಲಿದೆ ಎಂದು ಕೂಡ ನಾವು ಖಚಿತಪಡಿಸಿಕೊಳ್ಳಬೇಕಾಗುತ್ತದೆ ಎಂದರೆ ಸರಿ . ಅದೆಲ್ಲವನ್ನು ಖಚಿತಪಡಿಸಿಕೊಂಡೇ ಆರೋಪಿಗೆ ಸಾಲವನ್ನು ಕೊಟ್ಟಿರುತ್ತೇವೆ . ಬಿಡ್ ದಾರರು ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವಾಗ ಅವರು ಕೂಡ ಅರ್ಜಿಯನ್ನು ಕೊಡಬೇಕು ಎಂದರೆ ಸಾಕ್ಷಿ ಅರ್ಜಿ ತೆಗೆದುಕೊಳ್ಳುವುದಿಲ್ಲ ಎಂದು ನುಡಿದಿರುತ್ತಾರೆ . ನಾನು ಹೇಳಿದಂತಹ ಸೆವೆರಲೆಟ್ ಎಂಜೋಯ್ ವಾಹನ ಸಂಖ್ಯೆ ಕೆಎ 47/8592 ಆರೋಪಿಯ ಮಾಲೀಕತ್ವದಲ್ಲಿ ಇಲ್ಲ ಎಂದರೆ ಸಾಕ್ಷಿ ಪ್ರಧಾನ ಕಚೇರಿಗೆ ಕೇಳಿ ನೋಡುತ್ತೇನೆ ಎಂದು ನುಡಿದಿರುತ್ತಾರೆ . ಆರೋಪಿ ಸದರಿ ವಾಹನದ ಮಾಲೀಕನಲ್ಲದಿರುವ ಕಾರಣ

ಪಿಡಬ್ಲ್ಯೂಃ 2

ಯಾವತ್ತೂ ಸದರಿ ವಾಹನವನ್ನು ಅಡ ಇಟ್ಟು ಸಾಲ ಪಡೆಯುವ ಪ್ರಮೇಯ ಬಂದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಆ ಬಗ್ಗೆ ದಾಖಲಾತಿ ಇದೆ ಎಂದು ನುಡಿದಿರುತ್ತಾರೆ . ಆರೋಪಿ ಆ ವಾಹನದ ಮಾಲೀಕರಾಗಿದ್ದರು ಎಂಬ ಬಗ್ಗೆ ದಾಖಲಾತಿ ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.